# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2510 |
| ಸದಸ್ಯರ ಹೆಸರು | : | ಶ್ರೀ.ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 23.03.2022 |
| ಉತ್ತರಿಸುವ ಸಚಿವರು | : | ಪಶುಸಂಗೋಪನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯ, ಮಡಿಕೇರಿ ಮತ್ತು ವೀರಾಜಪೇಟೆ ತಾಲ್ಲೂಕುಗಳಿಗೆ ಪಶುಸಂಗೋಪನೆ ಇಲಾಖೆಯ ವತಿಯಿಂದ ಪಶುಸಂಗೋಪನೆ ಅಸ್ಪತ್ರೆಗಳಲ್ಲಿ ಸಿಬ್ಬಂದಿಗಳ ಕೊರತೆಯಿಂದ ಪ್ರಾಣಿಗಳಿಗೆ ಸೂಕ್ತವಾದ ಸಮಯದಲ್ಲಿ ಚಿಕಿತ್ಸೆ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು; | ಬಂದಿದೆ.<br><br>ಜಾನುವಾರುಗಳಿಗೆ ಸೂಕ್ತ ಸಮಯದಲ್ಲಿ ಚಿಕಿತ್ಸೆ ನೀಡಲು ಪಶುವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇರುವ ಕಡೆಗಳಲ್ಲಿ ಹತ್ತಿರದ ಪಶುವೈದ್ಯ ಸಂಸ್ಥೆಯಿಂದ ಅಧಿಕಾರಿ/ಸಿಬ್ಬಂದಿಗಳನ್ನು ಪ್ರಭಾರದ/ನಿಯೋಜನೆ ಮೇರೆಗೆ ಕಾರ್ಯ ವ್ಯವಸ್ಥೆ ಮಾಡಿ ಚಿಕಿತ್ಸೆ ನೀಡಲಾಗುತ್ತಿರುತ್ತದೆ.<br><br>ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿನ ಖಾಲಿ ಇರುವ 400 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ತುಂಬಲು ಸಚಿವ ಸಂಪುಟವು ಅನುಮತಿ ನೀಡಿದ್ದು, ಅದರಂತೆ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ, ಆಯ್ಕೆ ಪ್ರಕ್ರಿಯೆ ಮುಗಿದ ನಂತರ ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇಮಕ ಮಾಡಲು ಕ್ರಮವಹಿಸಲಾಗುವುದು.<br><br>ಜಾನುವಾರು ಅಭಿವೃದ್ಧಿ ಅಧಿಕಾರಿ ಹುದ್ದೆಗಳು ಮುಂಬಡ್ತಿ ಹುದ್ದೆಗಳಾಗಿದ್ದು, ಈಗಾಗಲೇ 115 ಹುದ್ದೆಗಳಿಗೆ ಜಾನುವಾರು ಅಧಿಕಾರಿ ಹುದ್ದೆಗಳಿಂದ ಮುಂಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಲಾಗಿದೆ.<br><br>ಅನುಚ್ಛೇದ 371 (ಜೆ) ರಡಿ ಪಶುವೈದ್ಯಕೀಯ ಪರೀಕ್ಷಕರ 32 ಹುದ್ದೆಗಳನ್ನು ಮತ್ತು ಪಶುವೈದ್ಯಕೀಯ ಸಹಾಯಕರ 83 ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. |

<table>
<tr><td></td><td></td><td>ಖಾಲಿ ಇರುವ ಲಿಪಿಕ ವರ್ಗದ ಹುದ್ದೆಗಳನ್ನು, 'ಡಿ' ದರ್ಜೆ ಮತ್ತು ವಾಹನ ಚಾಲಕರ ಹುದ್ದೆಗಳನ್ನು ಅನುಕಂಪಾರ್ಥ ಅರ್ಹತೆ ಆಧಾರದ ಮೇಲೆ ನೇರ ನೇಮಕಾತಿ ಮಾಡಲಾಗುತ್ತಿದೆ.<br><br>ಇನ್ನುಳಿದಂತೆ ಖಾಲಿ ಇರುವ 'ಡಿ' ದರ್ಜೆ ಮತ್ತು ವಾಹನ ಚಾಲಕರ ಹುದ್ದೆಗಳಿಗೆದುರಾಗಿ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆಯಲಾಗುತ್ತಿದೆ.</td></tr>
<tr><td>ಆ)</td><td>ಕಳೆದ 3 ವರ್ಷಗಳಿಂದ ಪಶುಸಂಗೋಪನಾ ಅಸ್ಪತ್ರೆಗಳನ್ನು ದುರಸ್ಥಿ ಮಾಡಲು ಸರ್ಕಾರ ಬಿಡುಗಡೆ ಮಾಡಿರುವ ಒಟ್ಟು ಅನುದಾನ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)</td><td>ಕಳೆದ 3 ವರ್ಷಗಳಿಂದ ಪಶುಸಂಗೋಪನಾ ಅಸ್ಪತ್ರೆಗಳನ್ನು ದುರಸ್ಥಿ ಮಾಡಲು ಸರ್ಕಾರ ಬಿಡುಗಡೆ ಮಾಡಿರುವ ಒಟ್ಟು ಅನುದಾನ ಈ ಕೆಳಕಂಡಂತಿದೆ.
<table>
<tr><th rowspan="2">ತಾಲ್ಲೂಕು</th><th colspan="4">ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ)</th></tr>
<tr><th>2018-19</th><th>2019-20</th><th>2020-21</th><th>ಒಟ್ಟು</th></tr>
<tr><td>ಮಡಿಕೇರಿ</td><td>14.50</td><td>15.00</td><td>17.00</td><td>46.50</td></tr>
<tr><td>ವಿರಾಜ ಪೇಟೆ</td><td>9.50</td><td>23.50</td><td>11.00</td><td>44.00</td></tr>
<tr><td>ಸೋಮವಾರ ಪೇಟೆ</td><td>6.00</td><td>11.50</td><td>22.50</td><td>39.50</td></tr>
<tr><td>ಒಟ್ಟು</td><td>30.00</td><td>50.00</td><td>50.50</td><td>130.00</td></tr>
</table></td></tr>
<tr><td>ಇ)</td><td>ಸದರಿ ಎರಡು ತಾಲ್ಲೂಕುಗಳಲ್ಲಿ ಒಟ್ಟು ಎಷ್ಟು ಪಶುಸಂಗೋಪನಾ ಆಸ್ಪತ್ರೆಗಳಿವೆ; (ವಿವರ ನೀಡುವುದು)</td><td>ಕೊಡಗು ಜಿಲ್ಲೆಯ, ಮಡಿಕೇರಿ ಮತ್ತು ವೀರಾಜಪೇಟೆ ತಾಲ್ಲೂಕುಗಳ ಪಶುವೈದ್ಯಕೀಯ ಸಂಸ್ಥೆಗಳ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ.</th><th>ಸಂಸ್ಥೆಗಳು</th><th>ಮಡಿಕೇರಿ</th><th>ವಿರಾಜಪೇಟೆ</th><th>ಒಟ್ಟು</th></tr>
<tr><td>1</td><td>ಉಪನಿರ್ದೇಶಕರ ಕಛೇರಿ</td><td>1</td><td>-</td><td>1</td></tr>
<tr><td>2</td><td>ಜಿಲ್ಲಾ ಪಾಲಿಕ್ಲಿನಿಕ್</td><td>1</td><td>-</td><td>1</td></tr>
<tr><td>3</td><td>ಜಿಲ್ಲಾ ಮಟ್ಟದ ಪಶುಆಸ್ಪತ್ರೆ</td><td>1</td><td>-</td><td>1</td></tr>
<tr><td>4</td><td>ತಾಲ್ಲೂಕು ಮಟ್ಟದ ಪಶುಆಸ್ಪತ್ರೆ</td><td>-</td><td>1</td><td>1</td></tr>
<tr><td>5</td><td>ಪಶುವೈದ್ಯ ಆಸ್ಪತ್ರೆ</td><td>3</td><td>7</td><td>10</td></tr>
<tr><td>6</td><td>ಪಶುಚಿಕಿತ್ಸಾಲಯ</td><td>4</td><td>10</td><td>14</td></tr>
<tr><td>7</td><td>ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ</td><td>8</td><td>12</td><td>20</td></tr>
</table></td></tr>
</table>

| | | | | | |
|---|---|---|---|---|---|
| | | 8 | ಪ್ರಾದೇಶಿಕ ಕೋಳಿ ವಿಸ್ತರಣಾ | - | 1 | 1 |
| | | | ಒಟ್ಟು | 18 | 31 | 49 |

| | | |
|---|---|---|
| ಈ) | ಹೊಸದಾಗಿ ಪ್ರಾರಂಭವಾಗಬೇಕಾದ ಆಸ್ಪತ್ರೆಗಳ ಕಾಮಗಾರಿಯು ಯಾವ ಹಂತದಲ್ಲಿವೆ? (ವಿವರ ನೀಡುವುದು) | ಹೊಸದಾಗಿ ಪ್ರಾರಂಭವಾಗಬೇಕಾದ ಆಸ್ಪತ್ರೆಗಳ ಕಾಮಗಾರಿಯು ಯಾವುದು ಇರುವುದಿಲ್ಲ. |

ಸಂ: ಪಸಂಮೀ ಇ-78 ಪಸಸೇ 2022

(ಪ್ರಭು.ಬಿ.ಚವ್ಹಾಣ್)
ಪಶುಸಂಗೋಪನೆ ಸಚಿವರು